ಶ್ರೀ ಎಂ. ರಾಜಶೇಖರಮೂರ್ತಿ :—ಅದರ ಕೆಲವು ಕಾರ್ಖಾನೆಗಳು ಇವೆ. ಮೈಸೂರು–ಬೆಂಗಳೂರು ರೋಡಿನಲ್ಲಿ ಒಂದು ಇದೆ. ಹಾಗೆ ಹೊಸದಾಗಿ ಮಂಡ್ಯದಲ್ಲಿ ಮಾಡಲು ಪ್ರಯತ್ನ ನಡೆಯುತ್ತಿದೆ. ಬಾಕಿ ಎಲ್ಲಾ ಸಣ್ಣ ಪುಟ್ಟವುಗಳು, ಅದರ ಡೀಟೈಲ್ಸ್ ನನ್ನಲ್ಲಿ ಇಲ್ಲ.

ಶ್ರೀ ಎಂ. ನಾಗಪ್ಪ :—ತಾವು ಸಪ್ಲಿಮೆಂಟರಿಗೆ ಉತ್ತರ ಕೊಡುತ್ತಾ,, ಕಾಕಂಬಿಗೆ ಕೇಂದ್ರ ಸರ್ಕಾರದ ವರು ಬೆಲೆ ನಿಗದಿ ಮಾಡಿದ್ದಾರೆ. ಕಾರ್ಖಾನೆಯ ಸಕ್ಕರೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಇದರ ಬೆಲೆ ನಿಗದಿ ಮಾಡಿದರೆ, ಶುಗರ್ ರೇಟ್ ಕಡಿಮೆಯಾಗಬಹುದು ಎಂದು ಹೇಳಿದ್ದೀರಿ. ಇದರಿಂದ ನಿಮ್ಮ ನೀತಿ ಏನು ತೊರಿಸುತ್ತದೆ ಅಂದರೆ, ಸಕ್ಕರೆ ತಿನ್ನುವವರಿಗೆ ರೇಟ್ ಜಾಸ್ತಿಯಾದರೂ ಪರವಾ ಇಲ್ಲ. ಸರಾಯಿ ಕುಡಿಯತಕ್ಕವರಿಗೆ ಪ್ರೋತ್ಸಾಹ ಕೊಡಬೇಕೆಂದು, ಇದರ ರೇಟ್ ಜಾಸ್ತಿ ಮಾಡಿದರೆ, ಸಕ್ಕರೆ ಧಾರಣೆ ಕಡಿಮೆಯಾಗುತ್ತದೆಂದು ಈ ರೀತಿ ಮಾಡುವುದು ನಿಮ್ಮ ನೀತಿಯೇ?

ಶ್ರೀ ಎಂ. ರಾಜಶೇಖರಮೂರ್ತಿ ;— ಬೆಲೆ ನಿಗದಿ ಮಾಡತಕ್ಕದ್ದು ಕೇಂದ್ರ ಸರ್ಕಾರರಕ್ಕೆ ಸೇರಿದ್ದು, ನಮಗೆ ಸೇರಿದ್ದಲ್ಲ

TAKING OVER FISHERY AND LOCAL BODY SCHOOLS

427. SRI B. BHASKARA SHETTY (Kaup). —

Will the Minister for Education be pleased to state :—

(*a*) whether the Cabinet has decided to take over the schools which are under the control of Fisheries Department and Local Bodies to the control of Education Department from next year :

(*b*) whether there is a chance of of leaving some of the schools with the respective departments which taking over the said schools.

(*c*) if so, the compelling reasons for the same

(*d*) whether there is a proposal to open a sparate administrative division for the administration of the schools so taken over,

Sri N. M. KOTRABASAIAH SOGI (Deputy Minister for Education:

(*a*) This is under the consideration of the Government.

(*b*) Does not arise in view of reply to clause (*a*) above-

(*o*) Does not arise-

(*d*) Does not aries.

ಶ್ರೀ ಬಿ. ಭಾಸ್ಕರ ಶೆಟ್ಟಿ :—ಈ ಏಾನುಗಾರಿಗೆ ಇಲಾಖೆಯಲ್ಲಿರುವ ಶಾಲೆಗಳನ್ನು ಮತ್ತು ಇನ್ನಿತರ ಶಾಲೆಗಳನ್ನು ವಿದ್ಯಾಭ್ಯಾಸ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಏನಾದರೂ ಮಂತ್ರಿಮೆಂಡಲದಲ್ಲಿ ನಿರ್ಧಾರ ವಾಗಿದೆಯೇ? ಹಾಗಿದ್ದರೆ ಯಾಕೆ ತೆಗೆದುಕೊಳ್ಳಲಿಲ್ಲ ಮತ್ತು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ ;—ಅದನ್ನು ಉತ್ತರದಲ್ಲಿ ಹೇಳಿದ್ದೇನೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಭೌಕ್ಕರ ಶೆಟ್ಟಿ ;—ಪರಿಶೀಲನೆ ಎಷ್ಟು ವರ್ಷಗಳ ತನಕ ಹೋಗಬಹುದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ ;—ಇದನ್ನು ಒಳಗೊಂಡಂತಹ ಅಂಶ ಬಹಳ ಇದೆ. ಪರಿಶೀಲನೆ ಆದಷ್ಟು ಜಾಗ್ರತೆ ಮುಗಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

Mr. SPEAKER ;—Question hour is over.

ಶ್ರೀ ಎನ್. ಹುಚ್ಚುಮಾಸ್ತಿಗೌಡ ;—ಇಲ್ಲಿ ಶ್ರೀ ಟಿ. ಆರ್. ಶಾಮಣ್ಣನವರ ಪ್ರಶ್ನೆ ಇದೆ. ಆದ್ದರಿಂದ ತಾವು ಇದನ್ನು ಹೆಲ್ಡ್ ಓವರ್ ಮಾಡುವುದು ಅಗತ್ಯ.

Mr. SPEAKER:—Now I have called the short notice] question.

SHORT NOTICE QUESTION AND ANSWER

FIRE ACCIDENT IN MULBAGAL

6. SRI M. H. JAYAPRAKASH NARAYAN (Sirsi):—

Will the Minister for Revenue be pleased to state—

(*a*) the number of huts destroyed in fire accident in Mulbagal on Wednesday the 18th February 1970;

(*b*) the estimates loss;

(*c*) the immediate relief given to the affected families?

Sri H V. KOUJALGI (Minister for Revenue):—

(*a*) Two.

(*b*) Rs. 2,000.

(*c*) A sum of Rs. 50 has been given to each of the 2 suffers as an immediate relief.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್:—(ಇ)ಗೆ ಉತ್ತರವಾಗಿ ೫೦ ರೂಪಾಯಿಗಳಂತೆ ಪರಿಹಾರ ನೀಡಲಾಗಿದೆಯೆಂದು ಹೇಳಿದೆ. ಮೊದಲೇ ಅವರ ನಷ್ಟ ೨ ಸಾವಿರ ರೂಪಾಯಿಗಳಿಗೆ ಮಿಂಚಿರುವುದರಿಂದ, ಅವರು ಬಡವರಾಗಿರುವುದರಿಂದ ಈಗ ಅವರಿಗೆ ವಿಶೇಷ ಸಹಾಯವನ್ನು ಏನು ಮಾಡಿದ್ದೀರಿ?

2-00 P.M.

ಶ್ರೀ ಎಚ್. ವಿ. ಕೌಜಲಗಿ:—ಈಗ ಇಮ್ಮಿಡಿಯಟ್ ರಿಲೀಫ್ ಎಂದು ಅವರಿಗೆ ಆಷ್ಟು ಪೊಬಲಗನ್ನು ಕೊಟಿದೆ. ನಷ್ಟ ಎಷ್ಟಾಗಿದೆಯೆಂಬ ಬಗ್ಗೆ ಚೌಕಸಿ ನಡೆದಿದೆ. ಹೆಚ್ಚು ನಷ್ಟವಾಗಿದ್ದರೆ, ೨೦೦ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳು ಕೊಡುತ್ತಾರೆ.

Sri J. P. SARWESH:—The amount of Rs. 50 given to persons woh suffer from fire accident is a very small amount. Will the Government consider and issue orders to enhance the amount to at least Rs. 500?